ವಸ್ತುವೊಂದು ನನ್ನೊಳಗೆ ಬೆಳೆಯಲು, ಮಾಗಲು ಸಾಕಷ್ಟು ಕಾಲಾವಕಾಶ ಕೊಡುತ್ತೇನೆ. ನನ್ನ ಮನಸ್ಸಿಗೆ ಒಪ್ಪಿಗೆಯಾಗದ ಯಾವುದನ್ನೂ ನಾನು ಬರೆಯುವುದೂ ಇಲ್ಲ, ಮಾಡುವುದೂ ಇಲ್ಲ. ಪ್ರಶಸ್ತಿಯೋ, ಸ್ಥಾನವೋ ಯಾವುದೇ ಆಗಲಿ, ನನ್ನ ಆತ್ಮ ಒಪ್ಪಿದರೆ ಮಾತ್ರ ನಾನು ಒಪ್ಪುವುದು.



ಲೇಖಕಿ ಹಿಮಾಂಶಿ ಅವರೊಂದಿಗೆ ಸಂದರ್ಶಕಿ ಎಂ.ಎಸ್. ಆಶಾದೇವಿ

ಮತ್ತು ಪತ್ರಕರ್ತರಾಗಿದ್ದರು. ಗಾಂಧಿಯವರ ಜೊತೆ ಅವರಿಗೆ ಹತ್ತಿರದ ಸಂಬಂಧವಿತ್ತು. ಗಾಂಧಿ ಅವರಿಗೆ ಪತ್ರ ಬರೀತಾ ಇದ್ದರು. ಸರಸ್ವತಿ ಚಂದ್ರ ಅನ್ನುವ ಕೃತಿ ಸರಣಿ ಈಗಲೂ ಗುಜರಾತಿನ ಮತ್ತು ಭಾರತದ ಮುಖ್ಯ ಕೃತಿ ಅಂತ ಹೇಳ್ತಾರೆ.

◆ **ಬರವಣಿಗೆ ನಿಮ್ಮ ಮಟ್ಟಿಗೆ ಏನು?**

ಬರವಣಿಗೆ ಅಂದರೆ ನನ್ನ ಪ್ರಕಾರ ಬೇರೊಬ್ಬರ ನೋವು, ಮೌನ, ಶೋಷಣೆಯನ್ನ ಮರುಮಾತಿಲ್ಲದೆ ಜನ ಅದಕ್ಕೆ ಬಲಿಯಾಗುತ್ತಾ ಸಂಕಟಪಡುವುದನ್ನು ನನ್ನ ಭಾಷೆಯಲ್ಲಿ ಹಿಡಿಯುವುದು. ಜಗತ್ತಿನಲ್ಲಿ ಎಲ್ಲಾದರೊಂದು ಕಡೆ ಜನ ಇದಕ್ಕೆ ಮಿಡಿಯುತ್ತಾರೆ ಎನ್ನುವ ನಂಬಿಕೆಯಿಂದ ನಾನು ಬರೆಯುತ್ತೇನೆ. ಜನ ಯಾಕಾಗಿ ಪ್ರತಿರೋಧಿಸದೇ ಶೋಷಣೆಗೆ ಒಳಗಾಗುತ್ತಾರೆ ಎನ್ನುವುದು ನನ್ನನ್ನು ಸದಾ ಕಾಡುತ್ತದೆ.

◆ **ಬರವಣಿಗೆ ಈ ದೃಷ್ಟಿಯಿಂದ ಪ್ರಾತಿನಿಧಿಕ...**

ಹೌದು.

◆ **ನಿಮ್ಮದು ನಿಮ್ಮದೇ ಆದ ಶೈಲಿ ಮತ್ತು ತಂತ್ರದ, ಭಾಷೆಯ ಬರವಣಿಗೆ. ಗುಜರಾತಿನಲ್ಲಿ ಇದಕ್ಕೆ ಸಿಕ್ಕ ಪ್ರತಿಕ್ರಿಯೆ?**

ನನಗೆ ನನ್ನದೇ ಆದ ಓದುಗ ವರ್ಗವಿದೆ. ನನ್ನ ಬರವಣಿಗೆಯನ್ನು ಜನ ಒಪ್ಪಿದ್ದಾರೆ, ಮೆಚ್ಚಿದ್ದಾರೆ. ಚರ್ಚಿಸುತ್ತಲೇ ಇರುತ್ತಾರೆ.

◆ **ಲೇಖಕಿಯಾಗಿ ಇದು ನಿಮಗೆ ಸಂತೋಷದ, ಸಂತೃಪ್ತಿಯ ವಿಷಯ ಅಲ್ಲವೇ?**

ನನಗೆ ಖಂಡಿತಾ ಸಂತೃಪ್ತಿಯಿದೆ. ಮತ್ತು ನಾನಾದರೂ ಆತುರದಿಂದ ಬರೆಯುವುದಿಲ್ಲ. ವಸ್ತುವೊಂದು ನನ್ನೊಳಗೆ ಬೆಳೆಯಲು, ಮಾಗಲು ಸಾಕಷ್ಟು ಕಾಲಾವಕಾಶ ಕೊಡುತ್ತೇನೆ. ನನ್ನ ಬುದ್ಧಿ ಭಾವದಲ್ಲಿ ಅದು ಒಂದು ಆಕಾರವನ್ನು ಪಡೆದುಕೊಂಡ ಮೇಲೆಯೇ ನಾನು ಬರೆಯಲು ಕೂರುತ್ತೇನೆ. ಆಗ ಹೆಚ್ಚು ಬದಲಾವಣೆಯ ಅಗತ್ಯ ಇರುವುದಿಲ್ಲ. ನನ್ನ ಮನಸ್ಸಿಗೆ ಒಪ್ಪಿಗೆಯಾಗದ ಯಾವುದನ್ನೂ ನಾನು ಬರೆಯುವುದೂ ಇಲ್ಲ, ಮಾಡುವುದೂ ಇಲ್ಲ. ಪ್ರಶಸ್ತಿಯೋ, ಸ್ಥಾನವೋ ಯಾವುದೇ ಆಗಲಿ, ನನ್ನ ಆತ್ಮ ಒಪ್ಪಿದರೆ ಮಾತ್ರ ನಾನು ಒಪ್ಪುವುದು.

◆ **ಕುವೆಂಪು ಪ್ರಶಸ್ತಿಯನ್ನು ಒಪ್ಪಿದ ಹಾಗೆ. (ಕಳೆದ ಕೆಲವು ವರ್ಷಗಳಿಂದ ಹಿಮಾಂಶಿಯವರು ಯಾವುದೇ ಪ್ರಶಸ್ತಿಯನ್ನೂ ಒಪ್ಪಿಕೊಳ್ಳುತ್ತಿಲ್ಲ. ಕುವೆಂಪು ಅವರ ಬಗೆಗೆ ವಿವರವಾಗಿ ಹೇಳಿದ ಮೇಲೆ ಅವರು ಪ್ರಶಸ್ತಿ ಒಪ್ಪಿಕೊಂಡರು, ಅದೂ ಕಾರ್ಯಕ್ರಮ ಸರಳವಾಗಿರಬೇಕು, ಹೆಚ್ಚು ಜನ ಇರಬಾರದು ಇತ್ಯಾದಿ ಕರಾರುಗಳ ಮೇಲೆ. ಕಾರ್ಯಕ್ರಮದ ಆಪ್ತತೆಯನ್ನು ಒಪ್ಪಿಯೂ ಅವರು ಅದೆಷ್ಟೊಂದು ಜನ ವೇದಿಕೆಯ ಮೇಲಿದ್ದರು, ತಮಗೆ ಎಷ್ಟು ಸಂಕೋಚವಾಯಿತು ಎನ್ನುವುದನ್ನೂ ಹೇಳಿದರು).**

ಹೌದು. ಕರ್ನಾಟಕದ 'ಶಾಶ್ವತಿ ಪ್ರಶಸ್ತಿ'ಯನ್ನೂ ನಾನು ಬೇಡ ಎಂದಿದ್ದೆ. ಆದರೆ ಆಯೋಜಕರು ನಂಜನಗೂಡು ತಿರುಮಲಾಂಬ ಅವರ ಬಗ್ಗೆ ಹೇಳಿದಾಗ, ಆಕೆಯ ಮೇಲಿನ ಅಪಾರ ಗೌರವದಿಂದ ನಾನು ಪ್ರಶಸ್ತಿಯನ್ನು ಸಂತೋಷವಾಗಿ ಸ್ವೀಕರಿಸಿದೆ.

◆ **ನಿಮ್ಮ ಸ್ತ್ರೀಪಾತ್ರಗಳ ಬಗ್ಗೆ ಹೇಳಿ.**

ನನ್ನೆಲ್ಲ ಸ್ತ್ರೀಪಾತ್ರಗಳ ಬಗೆಗೂ ನನಗೆ ಪ್ರೀತಿಯೇ. ಅವಳಿಗೆ ತನ್ನ ಬಗ್ಗೆ ತನಗೆ ನಂಬಿಕೆ ಹುಟ್ಟಿದಾಗ, ಆಕೆ ಅದ್ಭುತಗಳನ್ನು ಸೃಷ್ಟಿಸಬಲ್ಲಳು. ಆಕೆ ಹುಟ್ಟಾ ತಾಯಿ. ಪೊರೆಯುವುದನ್ನು, ಎದುರಿಸುವುದನ್ನು, ಎದುರಿಸಿ ತನ್ನ ಬದುಕನ್ನು ಕಟ್ಟಿಕೊಳ್ಳುವುದನ್ನು ಯಾರಿಂದಲೂ ಅಲ್ಲ, ತನ್ನಿಂದಲೇ ಕಲಿಯಬೇಕು. ಅವಳ ಒಳಗೇ ಇದೆ ಅದು.

◆ **ನಿಮ್ಮ 'ಲವ್ ಲೆಟರ್ಸ್' ಕೃತಿಯ ಬಗ್ಗೆ ಕೆಲವು ಮಾತು ಹೇಳಿ.**

ಗಂಡಾಗಲೀ ಹೆಣ್ಣಾಗಲೀ ಒಬ್ಬರು ಇನ್ನೊಬ್ಬರಿಂದ ಕಲಿಯುವುದು ಇದ್ದೇ ಇರುತ್ತದೆ. ಇಲ್ಲಿ ಗಂಡು ಅವಳ ಜೊತೆ ಸರಿಯಾಗಿ ನಡೆದುಕೊಳ್ಳದೇ ಇದ್ದಾಗಲೂ ಅದರಿಂದಲೂ ಕಲಿಯುವುದು ಇದ್ದೇ ಇರುತ್ತದೆ. ಇದರ ಬಗೆಗೆ ಕೋಪವೋ ದ್ವೇಷವೋ ಇಲ್ಲದೆಯೂ ಹೆಣ್ಣಿಗೆ ಇದನ್ನು ಹೇಳುವುದು ಸಾಧ್ಯವಾಗುತ್ತದೆ.

◆ **ಗುಜರಾತಿನ ವರ್ತಮಾನದ ಬಗ್ಗೆ ಹೇಳಿ.**

ಕಷ್ಟಕರವಾಗಿದೆ. ಪ್ರಭುತ್ವದ ವಿರುದ್ಧ ಮಾತನಾಡುವವರನ್ನು ಎಲ್ಲೂ ಕರೆಯಲಾಗುವುದಿಲ್ಲ. ನನ್ನ ಇತ್ತೀಚಿನ ಕೃತಿಯಲ್ಲಿ ನಾನು ಯಾವ ಸಮಸ್ಯೆಯನ್ನೂ ಬಿಟ್ಟಿಲ್ಲ. ಭ್ರಷ್ಟಾಚಾರದಿಂದ ಹಿಡಿದು ಎಲ್ಲವನ್ನೂ ಅದರಲ್ಲಿ ಚರ್ಚಿಸಿದ್ದೇನೆ.

◆ **ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕುತ್ತು ಬಂದಿದೆ ಎನ್ನುತ್ತೀರಾ?**

ಅನುಮಾನವೇ ಇಲ್ಲ.

ಪ್ರತಿಕ್ರಿಯಿಸಿ: feedback@sudha.co.in